ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್–7391/2014 | DRE-2

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ: 18/03/2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರ ಅನ್ವಯ ಶಿಫಾರಸ್ಸು ವರದಿ

ವಿಷಯ: 1ನೇ ಎದುರುದಾರರಾದ ಶ್ರೀಮತಿ ಶಶಿಕಲಾ ಚೌಟ, ಅಧ್ಯಕ್ಷರು, ಅರಿಯಡ್ಕ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾದ್ಯವಿಲ್ಲದೇ ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ವರದಿಯ ನಡವಳಿಕೆ–ಕುರಿತು.,

*****

ಶ್ರೀ ಲೋಕೇಶ್ ರೈ ಬಿನ್ ಸಂಜೀವ ರೈ, ಅರಿಯಡ್ಕ ಗ್ರಾಮ, ಪುತ್ತೂರು ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀಮತಿ ಶಶಿಕಲಾ ಚೌಟ, ಅಧ್ಯಕ್ಷರು, ಪುತ್ತೂರು ಮತ್ತು, (2) ಶ್ರೀ ರಾಮಚಂದ್ರ ಹಜೇರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅರಿಯಡ್ಕ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರುಗಳು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಪುತ್ತೂರು ತಾಲ್ಲೂಕಿನ ಅರಿಯಡ್ಕ ಗ್ರಾಮ ಪಂಚಾಯತಿಯಲ್ಲಿ ದಿನಾಂಕ: 28/10/2014 ರಂದು ನಡೆದ ಸಾಮಾನ್ಯ ಸಭೆಯ ನಡವಳಿಯನ್ನು ಬಿಳಿ ಶಾಯಿ ಬಳಸಿ ಎದುರುದಾರರು ತಿದ್ದಿರುತ್ತಾರೆಂದು ಹಾಗೂ ದಿನಾಂಕ: 18/11/2014 ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯ ಪುಸ್ತಕವನ್ನು ಬದಲಾಯಿಸಿ ಪುನ: ಬೇರೆ ಪುಸ್ತಕದಲ್ಲಿ

ಬರೆದಿರುತ್ತಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ), ತಾಲ್ಲೂಕು ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರ ಮುಖಾಂತರ ಕೂಲಂಕಷವಾಗಿ ತನಿಖೆ ನಡೆಸಿ ವಿವರವಾದ ವರದಿಯನ್ನು ದಿನಾಂಕ: 05/02/2017 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದೂರು ಸಲ್ಲಿಸಿ, ಎದುರುದಾರರುಗಳು ದಿನಾಂಕ: 28/10/2014ರ ಸಾಮಾನ್ಯ ಸಭೆಯಲ್ಲಿ ಬಿಳಿ ಹಾಳೆಯಲ್ಲಿ ನಿರ್ಣಯ ದಾಖಲಿಸಿರುವುದಾಗಿ ಮತ್ತು ನಿರ್ಣಯ ಪುಸ್ತಕದಲ್ಲಿ ವೈಟ್ನರ್ ಹಾಕಿ ತಮಗೆ ಬೇಕಾದ ಹಾಗೆ ತಿದ್ದುಪಡಿ ಮಾಡಿಕೊಂಡಿದ್ದು, ನಿರ್ಣಯ ಸಂಖ್ಯೆ: 10/2014–15, 20/2014–15, 23/2014–15, 32/2014–15, 33/2014–15, 35/2014–15 ಮತ್ತು 54/2014–15, ಒಂದೇ ವರ್ಷದಲ್ಲಿ 7 ನಿರ್ಣಯಗಳನ್ನು ತಿರುಚಿ ತಮಗೆ ಬೇಕಾದ ಹಾಗೆ ಬರೆದಿರುತ್ತಾರೆಂದು ಅಪಾದಿಸಿರುತ್ತಾರೆ. ಈ ಸಂಬಂಧ ಪರಿಶೀಲಿಸಲಾಗಿ,

- ದಿನಾಂಕ: 24/06/2014ರ ಸಾಮಾನ್ಯ ಸಭೆಯ ನಿರ್ಣಯ ಪುಸ್ತಕದಲ್ಲಿ ನಿರ್ಣಯವನ್ನು ತಿದ್ದಿರುವುದು ಕಂಡುಬಂದಿರುತ್ತದೆ ಹಾಗೂ ಪಂಚಾಯತ್ ರಾಜ್ ನಿರ್ಣಯ ಪುಸ್ತಕದಲ್ಲಿ ನಿರ್ಣಯವನ್ನು ತಿದ್ದಿರುವುದು ಕಂಡುಬಂದಿರುತ್ತದೆ.
- ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ ಸಂಖ್ಯೆ: 55 ರಂತೆ ನಿರ್ಣಯ ಪುಸ್ತಕದಲ್ಲಿ ಅಧ್ಯಕ್ಷರು ಸಹಿ ಮಾಡಿರುವುದಿಲ್ಲ.
- 2ನೇ ಎದುರುದಾರರು ನಿಯಮಾವಳಿಯಂತೆ ನಿರ್ಣಯವನ್ನು ಪುಸ್ತಕದಲ್ಲಿ ದಾಖಲಿಸಿರುವುದು ಕಂಡುಬರುವುದಿಲ್ಲ.
- ನಿರ್ಣಯ ನಂ. 20/2014–15ರ ನಿರ್ಣಯವನ್ನು ತಿದ್ದಿರುವುದು ಕಂಡುಬರುತ್ತದೆ.
- ದಿನಾಂಕ: 30/07/2014ರ ಸಾಮಾನ್ಯ ಸಭೆ ನಿರ್ಣಯ ಸಂಖ್ಯೆ: 32/2014–15, 33/2014–15, 35/2014–15 ಮತ್ತು ದಿನಾಂಕ: 26/08/2014ರ ಸಾಮಾನ್ಯ ಸಭೆಯ

(24)

COMPT/UPLOK/MYS-7391/2014/DRE-2

ನಿರ್ಣಯ ಸಂಖ್ಯೆ: 54/2014-15 ನಿರ್ಣಯವನ್ನು ವೈಟ್ನರ್ ಹಾಕಿ ತಿದ್ದುಪಡಿ ಮಾಡಿರುವುದು ಕಂಡುಬರುತ್ತದೆ.

- ಮೇಲಿನ ಎಲ್ಲಾ ತಿದ್ದುಪಡಿಯ ಸಂದರ್ಭದಲ್ಲಿ ಈ ಕೆಳಕಂಡವರು ಕರ್ತವ್ಯ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತಾರೆ.

  (1) ಶ್ರೀಮತಿ ಶಶಿಕಲಾ ಚೌಟ, ಅಧ್ಯಕ್ಷರು, ಅರಿಯಡ್ಕ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

  (2) ಶ್ರೀ ಬಾಬು ರಾಮಚಂದ್ರ ಹಜೇರಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಅರಿಯಡ್ಕ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ.

3. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಪುತ್ತೂರು ರವರು ಸಲ್ಲಿಸಿರುವ ವರದಿಯನ್ನು 1 ಮತ್ತು 2ನೇ ಎದುರುದಾರರುಗಳಿಗೆ ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದರೂ ಸಹಾ, ಇದುವರೆವಿಗೂ ಯಾವುದೇ ಪೂರಕ ದಾಖಲಾತಿಗಳನ್ನು ನಿಗಧಿತ ದಿನಾಂಕದೊಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ 1 ಮತ್ತು 2ನೇ ಎದುರುದಾರರುಗಳ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಲಾಗಿದೆ.

4. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 1 ಮತ್ತು 2ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

   - 1 ಮತ್ತು 2ನೇ ಎದುರುದಾರರುಗಳು ದಿನಾಂಕ: 24/06/2014ರ ಸಾಮಾನ್ಯ ಸಭೆಯ ನಿರ್ಣಯ ಪುಸ್ತಕದಲ್ಲಿ ನಿರ್ಣಯವನ್ನು ಹಾಗೂ ಪಂಚಾಯತ್ ರಾಜ್ ನಿರ್ಣಯ ಪುಸ್ತಕದಲ್ಲಿ ನಿರ್ಣಯವನ್ನು ತಿದ್ದುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

IZ(E)



- ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ ಸಂಖ್ಯೆ: 55 ರಂತೆ ನಿರ್ಣಯ ಪುಸ್ತಕದಲ್ಲಿ 2ನೇ ಎದುರುದಾರರಾದ ಅಧ್ಯಕ್ಷರು ಸಹಿ ಮಾಡದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 2ನೇ ಎದುರುದಾರರು ನಿಯಮಾವಳಿಯಂತೆ ನಿರ್ಣಯವನ್ನು ಪುಸ್ತಕದಲ್ಲಿ ದಾಖಲಿಸದೇ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 1 ಮತ್ತು 2ನೇ ಎದುರುದಾರರುಗಳು ನಿರ್ಣಯ ನಂ. 20/2014–15ರ ನಿರ್ಣಯವನ್ನು ತಿದ್ದುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.
- 1 ಮತ್ತು 2ನೇ ಎದುರುದಾರರುಗಳು ದಿನಾಂಕ: 30/07/2014ರ ಸಾಮಾನ್ಯ ಸಭೆ ನಿರ್ಣಯ ಸಂಖ್ಯೆ: 32/2014–15, 33/2014–15, 35/2014–15 ಮತ್ತು ದಿನಾಂಕ: 26/08/2014ರ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ: 54/2014–15 ನಿರ್ಣಯವನ್ನು ವೈಟ್ನರ್ ಹಾಕಿ ತಿದ್ದುಪಡಿ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '1 ಮತ್ತು 2ನೇ ಎದುರುದಾರರುಗಳು' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '1 ಮತ್ತು 2ನೇ ಎದುರುದಾರರುಗಳು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

6. 1ನೇ ಎದುರುದಾರರಾದ ಶ್ರೀಮತಿ ಶಶಿಕಲಾ ಚೌಟ, ಅಧ್ಯಕ್ಷರು, ಅರಿಯಡ್ಕ ಗ್ರಾಮ ಪಂಚಾಯತ್, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರು ಸರ್ಕಾರಿ ನೌಕರರಾಗಿರುವುದಿಲ್ಲ, ಈ ಸಂಬಂಧ ಸದರಿಯವರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮಾವಳಿಗಳಡಿಯಲ್ಲಿ ಕ್ರಮ ಜರುಗಿಸಲು ಸಾಧ್ಯವಿಲ್ಲದೇ

COMPT/UPLOK/MYS-7391/2014/DRE-2 12(1)

ಇರುವ ಕಾರಣ, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಕ್ರಮ ಕೈಗೊಳ್ಳಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಒಂದು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 18/3/17.

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**